ತುಂಬಬೇಕಷ್ಟೆ. ಆದರೆ ಈಗ ಪರಿಸ್ಥಿತಿ ಹೇಗಿದೆ ಎಂದರೆ ಮೂರು ದಿನ ಬಿಡಿ, ಒಂದು ಶೋಗೆ ಪ್ರೇಕ್ಷಕರು ಬಂದಿಲ್ಲದಿದ್ದರೆ ಮುಂದಿನ ಶೋ ರದ್ದು ಮಾಡುತ್ತಾರೆ. ಬಿಡುಗಡೆಯಾಗುವ ಸಿನಿಮಾಗಳೂ ಅಷ್ಟೇ ಇರುತ್ತವೆ. ಒಂದೊಮ್ಮೆ ಈಗ ಬಿಡುಗಡೆಯಾಗಲಿರುವ ಸಿನಿಮಾಗಳ ಬಿರುಗಾಳಿಗೆ ನಮ್ಮ ಸಿನಿಮಾ ಸಿಲುಕಿದರೆ ಒಂದು ವಾರವಲ್ಲ, ಒಂದು ದಿನ ಚಿತ್ರಮಂದಿರಗಳಲ್ಲಿ ನಮ್ಮ ಚಿತ್ರ ಉಳಿಸಿಕೊಳ್ಳುವುದೂ ಕಷ್ಟವಾಗುತ್ತದೆ. ಆದರೆ ಈಗ ನಮ್ಮ ಜೊತೆಗೆ ಸ್ಪರ್ಧೆ ಕೊಡಲು ಯಾವ ಚಿತ್ರವೂ ಇಲ್ಲ. ಹಾಗಾಗಿ ಖಂಡಿತ ಒಂದಿಷ್ಟು ದಿನ ಯಾರೂ ಸಿನಿಮಾವನ್ನು ಚಿತ್ರಮಂದಿರದಿಂದ ಕಿತ್ತೊಗೆಯುವ ಯೋಚನೆ ಮಾಡುವುದಿಲ್ಲ. ಅಷ್ಟರಲ್ಲಿ ಸಿನಿಮಾ ಚೆನ್ನಾಗಿದೆ ಎಂಬ ಮಾತು ಕೇಳಿಬಂದು ಮತ್ತೊಂದಿಷ್ಟು ಪ್ರೇಕ್ಷಕರು ಬರುತ್ತಾರೆ. ಸಿನಿಮಾ ಉಳಿದುಕೊಳ್ಳುತ್ತದೆ' ಎನ್ನುವುದು ಮಂಸೋರೆ ಮಾತು. ಇದು ವಾಸ್ತವವೂ ಹೌದು. ಇದೇ ಲೆಕ್ಕಾಚಾರದಲ್ಲಿಯೇ ನ. 27ರಂದು ಅರವಿಂದ್ ಕಾಮತ್ ನಿರ್ದೇಶನದ 'ಅರಿಷಡ್ವರ್ಗ' ಸಿನಿಮಾ ಕೂಡ ಚಿತ್ರಮಂದಿರಗಳಲ್ಲಿ ತೆರೆಕಂಡಿದೆ.

### ಬಂದೇ ಬರುತಾರ ಜನ

ಜನರು ಓಟಿಟಿ ವೇದಿಕೆಗಳಿಗೆ ಒಗ್ಗಿಹೋಗಿದ್ದಾರೆ. ಇನ್ನು ಚಿತ್ರಮಂದಿರಗಳ ಕಡೆ ಮುಖ ಹಾಕುವುದಿಲ್ಲ ಎಂಬ ಹುಸಿ ಹೊಂಜು ಲಾಕ್‌ಡೌನ್ ಕಾಲದಲ್ಲಿಯೇ ಬಹುತೇಕ ಕರಗಿಹೋಗಿದೆ. ಸಿನಿಮಾ ಸಮುದಾಯ ಸಂಸ್ಕೃತಿ. ಅದನ್ನು ಸಾಮುದಾಯಿಕವಾಗಿ ಸಂಭ್ರಮಿಸಲೇ ಹೆಚ್ಚು ಜನರು ಇಷ್ಟಪಡುತ್ತಾರೆ. ಚಿತ್ರಮಂದಿರಗಳ ಒಳಗಿನ ಕತ್ತಲು ಪ್ರೇಕ್ಷಕನಿಗೆ ಏಕಕಾಲದಲ್ಲಿ ಸಾಮುದಾಯಿಕ ಮತ್ತು ವೈಯಕ್ತಿಕ ಎರಡು ರೀತಿಯ ಅನುಭವಗಳನ್ನು ನೀಡುತ್ತಿರುತ್ತದೆ. ಏಕಕಾಲದಲ್ಲಿ ಅವನು ಗುಂಪಿನಲ್ಲಿ ಕೂತು ಅದರ ಒಟ್ಟಾರೆ ಸ್ಪಂದನೆಯ ಭಾಗವೂ ಆಗುತ್ತಿರುತ್ತಾನೆ. ಹಾಗೆಯೇ ತೆರೆಯ ಮೇಲಿನ ದೃಶ್ಯಗಳನ್ನು ವೈಯಕ್ತಿಕವಾಗಿಯೂ ಆಸ್ವಾದಿಸುತ್ತಿರುತ್ತಾನೆ. ಈ ಅನುಭವ ಮೊಬೈಲ್, ಲ್ಯಾಪ್‌ಟಾಪ್‌ಗಳಲ್ಲಿ ಸಾಧ್ಯವಿಲ್ಲ.

## ಡ್ರಗ್ಸ್ ಮಾಫಿಯಾ ಕರಿನೆರಳು

2020ರಲ್ಲಿ ಚಿತ್ರಮಂದಿರಗಳಲ್ಲಿ ನೀಡಬೇಕಿದ್ದ ಮನರಂಜನೆಯನ್ನು ಸುದ್ದಿವಾಹಿನಿಗಳ ಮೂಲಕವೇ ನೀಡುತ್ತೇವೆ ಎಂದು ಚಿತ್ರರಂಗದ ಹಲವರು ಪಟತೊಟ್ಟಂತಿತ್ತು. ಲಾಕ್‌ಡೌನ್ ಸಮಯದಲ್ಲಿ ನಡುರಾತ್ರಿ ತಲೆನೋವಿನಲ್ಲಿ ತೇಲಾಡುತ್ತ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದುಕೊಂಡು ಸುದ್ದಿಯಾದವರು, ಕುಡಿದು ಓಡಿಸುತ್ತಿದ್ದಾಗ ತಡೆದ ಪೊಲೀಸರ ಮೇಲೆ ಎಗರಾಡಿದ್ದು ಸೇರಿದಂತೆ ಚಿತ್ರರಂಗದ ಬಣ್ಣರಹಿತ ಹಲವು ಮುಖಗಳು ಸುದ್ದಿವಾಹಿನಿಗಳ ಮೂಲಕ ಜನರಿಗೆ ತಲುಪಿದವು.

ಸುಶಾಂತ್ ಸಿಂಗ್ ರಜಪೂತ್ ಸಾವಿನಿಂದ ಸುರುಳಿಬಿಚ್ಚಿಕೊಂಡ ಡ್ರಗ್ಸ್ ಮಾಫಿಯಾ ಬಾಲ ಕನ್ನಡ ಚಿತ್ರರಂಗಕ್ಕೆ ತಟ್ಟಲು ತುಂಬ ಕಾಲವೇನೂ ಬೇಕಾಗಲಿಲ್ಲ. ಆದುವರೆಗೆ ಕೊರೊನಾ ಕಾಲದಲ್ಲಿ ಸಂಕಷ್ಟದಲ್ಲಿದ್ದವರಿಗೆ ಆಹಾರ, ಆರೋಗ್ಯಕಿಟ್‌ಗಳನ್ನು ನೀಡುತ್ತ, ಅದನ್ನು ಸೋಷಿಯಲ್ ಮೀಡಿಯಾದಲ್ಲಿ ಹರಿಬಿಡುತ್ತ ಹಾಯಾಗಿದ್ದ ರಾಗಿಣಿ ದ್ವಿವೇದಿ, ಸಿನಿಮೀಯ ರೀತಿಯಲ್ಲಿಯೇ ಜೈಲು ಪಾಲಾದರು. ಅವರ ಬೆನ್ನಿಗೇ ಸಂಜನಾ ಗಲ್ರಾನಿ ಕೂಡ ಸಿಸಿಬಿ ಪೊಲೀಸರ ಅತಿಥಿಯಾದರು. ನಡುವೆ ಕಾಮಿಡಿ ಕ್ಯಾರೆಕ್ಟರಿನ ಹಾಗೆ ಇಂದ್ರಜಿತ್ ಲಂಕೇಶ್ ಬಂದು ನಗಿಸಿಹೋದರು. ದಿಗಂತ್, ಐಂದ್ರಿತಾ, ಗೀತಾ ಭಟ್, ಅನುಶ್ರೀ ಸೇರಿದಂತೆ ಕಿರುತೆರೆ ಹಿರಿತೆರೆಯ ಹಲವರು ಪೊಲೀಸರ ಎದುರು ವಿಚಾರಣೆಗೆ ಹಾಜರಾಗಬೇಕಾಯ್ತು. ಇದರ ಜೊತೆಗೇ ಇನ್ನೂ ಕೆಲವರ ಹೆಸರುಗಳೂ ಡ್ರಗ್ಸ್ ಪ್ರಕರಣದ ಜೊತೆಗೆ ಕೇಳಿಬಂದರೂ ಅವರು ತೆರೆಮರೆಯಲ್ಲಿಯೇ ತಮ್ಮ ಅತಿಮಾನುಷ ಪ್ರಭಾವವನ್ನು ತೋರಿದ್ದರಿಂದಲೋ ಏನೋ ಬಣ್ಣ ಬಯಲಾಗಲಿಲ್ಲ. ಚಿತ್ರರಂಗದ ದೊಡ್ಡ ದೊಡ್ಡ ವ್ಯಕ್ತಿಗಳ ಹೆಸರೆಲ್ಲ ಬಯಲಿಗೆ ಬರುತ್ತದೆ ಎಂಬ ಮಾತುಗಳೆಲ್ಲವೂ ದೀಪಾವಳಿ ಪಟಾಕಿಯಂತೆಯೇ ಒಮ್ಮೆ ಹೊಗೆಯುಗುಳಿ ನಿಶ್ಚೇಷ್ಟಿತವಾದವೇ ವಿನಾ ಇಬ್ಬರು ನಟಿಯರ ಬಂಧನಕ್ಕಿಂತ ಮುಂದೆ ಹೋಗಲಿಲ್ಲ.

ಈ ಪ್ರಕರಣದಲ್ಲಿ ಬರೀ ನಟಿಯರನ್ನೇ ಕಟಕಟೆಯಲ್ಲಿ ನಿಲ್ಲಿಸಿದ್ದರ ವಿರುದ್ಧ ಕ್ಷೀಣಧ್ವನಿ ಕೇಳಿಬಂತಾದರೂ, ಮಹಿಳಾಪರ ಧ್ವನಿಗೆ ಗಾಂಧಿನಗರ ಯಾವತ್ತೂ ಕಿವುಡಾಗಿಯೇ ಇದ್ದಿದ್ದರಿಂದ ಇದೂ ಹಾಗೆಯೇ ಕಳೆದುಹೋಯ್ತು.



ಸ್ಯಾಂಡಲ್‌ವುಡ್ 20-21